| 1 | | 2 |
|---|---|---|
| 184. | ಪ್ರಾ. ಆ. ಕೇಂದ್ರ | ಬಾಗೇವಾಡಿ |
| 185. | -"- | ಅರಸಿಕೆರೆ |
| 186. | -"- | ದೇವನಸಮುದ್ರ |
| 187. | -"- | ಗಾದಿಗನೂರು |
| 188. | -"- | ಕಮಾಲಾಪುರ |
| 189. | -"- | ಕಂಪ್ಲಿ |
| 190. | -"- | ಎಂ.ಎಂ.ಹಳ್ಳಿ |
| 191. | -"- | ಕೊಗಲಿ |
| 192. | -"- | ಕೊಲಹಳ್ಳಿ |
| 193. | -"- | ಹನಸಿ |
| 194. | ಪ್ರಾ. ಆ. ಘಟಕ | ಬಾಗೇವಾಡಿ |
| | **ರಾಯಚೂರು ಜಿಲ್ಲೆ** | |
| 195. | ಪ್ರಾ. ಆ. ಕೇಂದ್ರ | ಪಾಮನಕಲ್ಲೂರು |
| 196. | -"- | ಮಸಲಾಪುರ |
| 197. | -"- | ಮುಸ್ಟೂರು |
| 198. | -"- | ಮುದೋಳ |
| 199. | -"- | ಹುಲಗೆರ |
| 200. | -"- | ಸಂತೆಕಲ್ಲೂರು |
| 201. | -"- | ಮಸರ್‌ಕಲ್ |
| 202. | -"- | ಅರಕೇರ |
| 203. | -"- | ಹಿರೇಬೂದೂರು |

**ಪಂಚಾಯತ್ ನೌಕರರ ಸೇವೆಯನ್ನು ಖಾಯಂ ಗೊಳಿಸುವುದು**

674 - ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಪಂಚಾಯತ್ ನೌಕರರ ಸೇವೆಯನ್ನು ಖಾಯಂ ಮಾಡುವ ಉದ್ದೇಶ ಸರ್ಕಾರಿಕ್ಕಿದೆಯೇ?*

ಅ) ಇದ್ದಲ್ಲಿ ಯಾವಾಗ ಮಾಡಲಾಗುವುದು ?

ಇ) ಗ್ರಾಮಪಂಚಾಯತ್ ನೌಕರರಿಗೆ ಕನಿಷ್ಠ ವೇತನ ನಿಗಿಧಿಗೊಳಿಸುವ ಉದ್ದೇಶ ಸರ್ಕಾರಕ್ಕಿದೆಯೇ ? ಇದ್ದಲ್ಲಿ ಎಷ್ಟು ಸಮಯದೊಳಗೆ ನಿಗಧಿಪಡಿಸಲಾಗುವುದು ?

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿಪಿ : 102: ವಿಇಎಲ್. 90 ದಿನಾಂಕ : 10-1-94 ರಲ್ಲಿ ಗ್ರಾಮ ಪಂಚಾಯತ್ ನೌಕರರಿಗೆ ನೀಡಬೇಕಾಗಿರುವ ಗರಿಷ್ಠ ವೇತನವನ್ನು ನಿಗಧಿ ಪಡಿಸಲಾಗಿದೆ.

## ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿ ಖರೀದಿಸಿರುವ ಪುಸ್ತಕಗಳು

678 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಪ್ರೌಢ ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1996-97 ಮತ್ತು 1997-98ನೇ ಸಾಲಿನಲ್ಲಿ ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿ ಖರೀದಿಸಿರುವ ಪುಸ್ತಕಗಳ ಒಟ್ಟು ಹಣ ಎಷ್ಟು ?

ಆ) ಈ ಪುಸ್ತಕಗಳನ್ನು ಯಾವ ಆಧಾರದ ಮೇಲೆ ಖರೀದಿಸಲಾಗಿದೆ ? ಖರೀದಿಸಿದ ಪುಸ್ತಕವನ್ನೇ ಪುನಃ ಖರೀದಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಮುಂದಿದ್ದಲ್ಲಿ, ಸರ್ಕಾರ ಈ ಬಗ್ಗೆ ತೆಗೆದು ಕೊಂಡಿರುವ ಕ್ರಮಗಳೇನು ?

ಶ್ರೀ ಜಿ. ಕೃಷ್ಣಪ್ಪ (ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು).

ಅ) 1996-97 - 156.15 ಲಕ್ಷ ರೂ.ಗಳು

1997-98 - 195.18 ಲಕ್ಷ ರೂ.ಗಳು

ಆ) ಮತ್ತು ಇ) ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಉನ್ನತ ಮಟ್ಟದ ಗ್ರಂಥ ಆಯ್ಕೆ ಸಮಿತಿಯನ್ನು ರಚಿಸಿದ್ದು, ಆ ಸಮಿತಿ ಆಯ್ಕೆ ಮಾಡಿದ ಗ್ರಂಥಗಳನ್ನು ಖರೀದಿಸಲಾಗಿದೆ.

ಹೌದು. ಪುಸ್ತಕ ಖರೀದಿ ನಿಯಮಾನುಸಾರ ಒಂದು ಗ್ರಂಥಾಲಯಕ್ಕೆ ಗರಿಷ್ಠ 3 ಪುಸ್ತಕಗಳನ್ನು ಖರೀದಿಸಬಹುದಾಗಿದೆ. ಕೆಲವು ಸಂದರ್ಭಗಳಲ್ಲಿ ಓದುಗರ ಸಂಖ್ಯೆ ಹೆಚ್ಚಳದಿಂದಾಗಿ ಆಯ್ಕೆ ಸಮಿತಿಯ ಅನುಮೋದನೆ ಮೇರೆಗೆ ಕೆಲವು ಶೀರ್ಷಿಕೆಗಳನ್ನು ಪುನಃ ಖರೀದಿಸಬಹುದಾಗಿದೆ.